ಈ ಮಾತಿನಲ್ಲಿ ತಪ್ಪೇನೂ ಇಲ್ಲ. ಈ ಮಾತು ವಿಶ್ವಾಸ್ ಅವರ ಮನಸ್ಸಿನ ಒಂದು ಮೂಲೆಯಲ್ಲಿ ಕುಳಿತಿತ್ತು. ಮಾತಿನ ಆಶಯಕ್ಕೆ ಅನುಗುಣವಾಗಿ ನಡೆದುಕೊಂಡ ಅವರು, ಷೇರು ಮೌಲ್ಯ ಕುಸಿತ ಕಂಡ ನಂತರದಲ್ಲಿ ಅದೇ ಕಂಪನಿಯ ಇನ್ನೊಂದಿಷ್ಟು ಷೇರುಗಳನ್ನು ಖರೀದಿಸಿದರು. ಆರಂಭದಲ್ಲಿ ₹ 116ಕ್ಕೆ ಖರೀದಿಸಿದ್ದವರು, ಈಗ ₹ 90ರಂತೆ ಖರೀದಿ ಮಾಡಿದರು. ಇಷ್ಟೆಲ್ಲ ಆಗಿ ಸರಿಸುಮಾರು ಆರು ತಿಂಗಳು ಕಳೆದಿವೆ. ಈ ಕಂಪನಿಯ ಷೇರುಗಳ ಮೇಲೆ ವಿಶ್ವಾಸ್ ಅವರು ಇದುವರೆಗೆ ಸರಿಸುಮಾರು ₹ 10 ಸಾವಿರ ಹೂಡಿಕೆ ಮಾಡಿದ್ದಾರೆ. ಅವರು ಹೂಡಿಕೆ ಮಾಡಿರುವ ಹಣದ ಮೌಲ್ಯವು ಈಗ ₹ 8,500ಕ್ಕೆ ಕುಸಿದಿದೆ. ಅಂದರೆ, ವಿಶ್ವಾಸ್ ಅವರ ಅಸಲು ಶೇಕಡ 15ರಷ್ಟು ಕರಗಿದೆ. ಕಂಪನಿಯು ತ್ರೈಮಾಸಿಕಗಳಲ್ಲಿ ಲಾಭ ಕಂಡಿರುವುದಾಗಿ ವರದಿ ನೀಡುತ್ತಿದೆ. ಆದರೆ, ಷೇರು ಮೌಲ್ಯ ಮಾತ್ರ ಹೆಚ್ಚಾಗುತ್ತಿಲ್ಲ. ವಿಶ್ವಾಸ್ ಅವರು ಎಷ್ಟು ಕಾಲ ತಾಳ್ಮೆಯಿಂದ ಕಾಯಬೇಕು?

ನೇಹಾ (ಹೆಸರು ಬದಲಾಯಿಸಲಾಗಿದೆ) ಅವರು ಖಾಸಗಿ ಬ್ಯಾಂಕ್ ಒಂದರ 100 ಷೇರುಗಳನ್ನು ತಲಾ ₹ 58ರಂತೆ ಖರೀದಿಸಿದರು. ಆ ಬ್ಯಾಂಕ್‌ನ ಷೇರು ಮೌಲ್ಯವು ₹ 28–30 ಆಸುಪಾಸಿನಲ್ಲಿ ಇದ್ದುದು ಕೆಲವೇ ತಿಂಗಳುಗಳ ಅವಧಿಯಲ್ಲಿ ₹ 55ರ ಗಡಿಯನ್ನು ದಾಟಿತ್ತು. ಮುಂದೆಯೂ ಈ ಬ್ಯಾಂಕ್‌ನ ಷೇರುಗಳ ಮೌಲ್ಯವರ್ಧನೆಯು ಇದೇ ಪ್ರಮಾಣದಲ್ಲಿ ಇರುತ್ತದೆ ಎಂದು ಭಾವಿಸಿದ ನೇಹಾ, ಅಷ್ಟು ಷೇರುಗಳನ್ನು ಖರೀದಿಸಿದ್ದರು. ಅದಾದ ಕೆಲವೇ ದಿನಗಳಲ್ಲಿ ಒಂದು ವರದಿ ಪ್ರಕಟವಾಯಿತು. ದೇಶದ ದೂರಸಂಪರ್ಕ ವಲಯದ ಪ್ರಮುಖ ಕಂಪನಿಯೊಂದು ಆರ್ಥಿಕವಾಗಿ ತೀರಾ ಸಂಕಷ್ಟಕ್ಕೆ ಸಿಲುಕಿದೆಯೆಂದೂ, ಆ ಕಂಪನಿಯ ಬ್ಯಾಂಕ್‌ಗಳಿಂದ ಪಡೆದಿರುವ ಸಾಲವನ್ನು ಮರುಪಾವತಿ ಮಾಡುವುದು ಕಷ್ಟವಾಗಿದೆ ಎಂದೂ ಆ ವರದಿ ಹೇಳಿತ್ತು. ಈ ವರದಿಯು ಪ್ರಕಟವಾದ ನಂತರ ಷೇರು ಮೌಲ್ಯ ಕುಸಿಯಲು ಆರಂಭಿಸಿತು. ಈಗ ಅದು ₹ 40–42ರ ಆಸುಪಾಸಿನಲ್ಲಿ ಇದೆ. ನೇಹಾ ಅವರ ಹೂಡಿಕೆಯ ಮೌಲ್ಯವು ಅಷ್ಟರಮಟ್ಟಿಗೆ ಕುಸಿದಿದೆ. ಅವರ ಅಸಲು ಮೊತ್ತ ಕೂಡ ಕರಗಿದೆ. ಅಸಲು ಮೊತ್ತದ ಜೊತೆ ಒಂದಿಷ್ಟು ಲಾಭವನ್ನು ನೋಡಲು ನೇಹಾ ಇನ್ನು ಎಷ್ಟು ಕಾಲ ಕಾಯಬೇಕು ಎಂಬುದು ಪ್ರಶ್ನೆ ಮಾತ್ರ.

ನೀವು ಒಂದು ಕಂಪನಿಯಲ್ಲಿ ಹಣ ಹೂಡಿಕೆ ಮಾಡಬೇಕು ಎಂದು ತೀರ್ಮಾನಿಸಿದ್ದೀರಿ. ಆದರೆ, ಆ ಕಂಪನಿಯು ನಡೆಸುತ್ತಿರುವ ವಹಿವಾಟು ಏನು, ಅದು ಹೇಗೆ ಲಾಭ ಗಳಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಿಮ್ಮಿಂದ ಸಾಧ್ಯವಾಗದೆ ಇದ್ದರೆ ಅದರಲ್ಲಿ ಹೂಡಿಕೆ ಮಾಡಬೇಡಿ ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳಿದ್ದರಂತೆ. ಅವರ ಈ ಮಾತು ವಿಶ್ವಾಸ್‌ಗೆ ಮೊದಲು ಗೊತ್ತಿರಲಿಲ್ಲ. ಕಂಪನಿಯು ಯಾವ ಬಗೆಯ ವಹಿವಾಟು ನಡೆಸುತ್ತಿದೆ ಎಂಬುದೇ ಗೊತ್ತಿಲ್ಲದೆ, ಅದರಲ್ಲಿ ಹಣ ಹೂಡಿಕೆ ಮಾಡಿದ್ದರು. ನೇಹಾ ಅವರಿಗೆ ತಾವು ಖರೀದಿಸಿರುವ ಬ್ಯಾಂಕ್‌ನ ಷೇರುಗಳ ಆಚೆಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಆ ಬ್ಯಾಂಕ್ ಯಾರಿಗೆಲ್ಲ ದೊಡ್ಡ ಮಟ್ಟದಲ್ಲಿ ಸಾಲ ನೀಡಿದೆ, ಸಾಲ ಪಡೆದವರ ಮರುಪಾವತಿ ಸಾಮರ್ಥ್ಯ ಎಷ್ಟಿದೆ ಎಂಬುದರ ಅರಿವು ಅವರಲ್ಲಿ ಇರಲಿಲ್ಲ. ಹಾಗಾಗಿಯೇ ಅವರು ಕೂಡ ನಷ್ಟ ಅನುಭವಿಸಬೇಕಾಯಿತು.

ಹೂಡಿಕೆ ಮಾಡುವ ಕಂಪನಿಗಳ ವಿಚಾರದಲ್ಲಿ ಆಮೂಲಾಗ್ರವಾಗಿ ತಿಳಿದುಕೊಳ್ಳಬೇಕಿರುವುದು ಬಹಳ ಅಗತ್ಯ ಎಂಬುದನ್ನು ಈ ಎರಡು ನಿದರ್ಶನಗಳು ಹೇಳುತ್ತವೆ. ಇವಿಷ್ಟೇ ಅಲ್ಲ. ಹೂಡಿಕೆ ಮಾಡಲು ಬಯಸುವ ಕಂಪನಿಯು ನಿರಂತರವಾಗಿ ಲಾಭ ಮಾಡುತ್ತ ಇದೆಯೇ, ವರ್ಷದಿಂದ ವರ್ಷಕ್ಕೆ ಲಾಭದ ಪ್ರಮಾಣ ಹೆಚ್ಚುತ್ತ ಇದೆಯೋ, ಕಡಿಮೆ ಆಗುತ್ತ ಇದೆಯೋ, ಕಂಪನಿಯ ಆದಾಯವು ಹೇಗೆ ಹೆಚ್ಚಳ ಕಾಣುತ್ತಿದೆ, ಲಾಭವು ಸ್ಥಿರವಾಗಿ ಇದೆಯೇ, ಷೇರುದಾರರಿಗೆ ಕಂಪನಿಯು ಸ್ಥಿರವಾಗಿ ಸಂಪತ್ತು ಸೃಷ್ಟಿಸಿಕೊಡುತ್ತ ಇದೆಯೇ, ಕಂಪನಿಯು ಬೇರೆ ಬೇರೆ ಕಡೆಗಳಿಂದ ಪಡೆದಿರುವ ಸಾಲ ಎಷ್ಟಿದೆ, ಆ ಸಾಲವನ್ನು ಕಂಪನಿಯು ಯಾವ ಉದ್ದೇಶಕ್ಕಾಗಿ ಬಳಸಿದೆ, ತನ್ನ ಪ್ರತಿಸ್ಪರ್ಧಿ ಕಂಪನಿಗಳಿಗಿಂತ ಹೆಚ್ಚಿನ ಸಾಧನೆಯನ್ನು ಮಾಡುತ್ತಿದೆಯೇ, ಅವರಿಗಿಂತ ಹೆಚ್ಚಿನ ಮಾರುಕಟ್ಟೆ ಪಾಲನ್ನು ಹೊಂದಿದೆಯೇ, ಸಾಂಸ್ಥಿಕ ಹೂಡಿಕೆದಾರರು ಎಷ್ಟು ಜನ ಆ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದ್ದಾರೆ, ಮ್ಯೂಚುವಲ್ ಫಂಡ್ ಸಂಸ್ಥೆಗಳು ಎಷ್ಟು ಹಣ ಹೂಡಿಕೆ ಮಾಡಿವೆ, ಅವು ಕಾಲಕಾಲಕ್ಕೆ ಹೂಡಿಕೆ ಪ್ರಮಾಣ ಹೆಚ್ಚಿಸುತ್ತ ಇವೆಯೋ ಅಥವಾ ಕಡಿಮೆ ಮಾಡುತ್ತ ಇವೆಯೋ... ಇಂತಹ ವಿಷಯಗಳನ್ನೆಲ್ಲ ಹೂಡಿಕೆದಾರರು ಆಗಾಗ ಪರಿಶೀಲಿಸುತ್ತ ಇರಬೇಕು.

ಕಂಪನಿಯನ್ನು ಮುನ್ನಡೆಸುತ್ತ ಇರುವವರು ಯಾರು, ಅವರಿಗೆ ಭವಿಷ್ಯದ ಸವಾಲುಗಳಿಗೆ ಕಂಪನಿಯನ್ನು ಸಜ್ಜಾಗಿಸುವ ಸಾಮರ್ಥ್ಯ ಇದೆಯೇ, ಕಂಪನಿಯು ಈಗ ನಡೆಸುತ್ತಿರುವ ವಹಿವಾಟು ಮುಂದಿನ ದಿನಗಳಲ್ಲಿ ಎಷ್ಟರಮಟ್ಟಿಗೆ ಪ್ರಸ್ತುತವಾಗಿ ಉಳಿಯಲಿದೆ ಎನ್ನುವ ವಿಷಯಗಳನ್ನು ಕೂಡ ಹೂಡಿಕೆದಾರ ಗಮನಿಸುತ್ತ ಇರಬೇಕು. ಇಂಥವುಗಳ ಮೇಲೆ ಕಣ್ಣಿಡುವ ಜೊತೆಯಲ್ಲೇ, ಕಂಪನಿಯ ಕಾರ್ಯಸಾಮರ್ಥ್ಯದ ಬಗ್ಗೆ ರೇಟಿಂಗ್ಸ್ ಸಂಸ್ಥೆಗಳು ಹಾಗೂ ವಿವಿಧ ಬ್ರೋಕರೇಜ್ ಸಂಸ್ಥೆಗಳು ನೀಡುವ ವರದಿಗಳನ್ನು ಓದಿಕೊಂಡಿದ್ದರೆ ಉತ್ತಮ. ಇಷ್ಟೆಲ್ಲ ಪೂರ್ವಸಿದ್ಧತೆಗಳೊಂದಿಗೆ ಹೂಡಿಕೆಯ ಪಯಣ ಆರಂಭಿಸಿದರೆ, ಹೂಡಿಕೆದಾರನಿಗೆ ಯಶಸ್ಸು ಸಿಗುವ ಸಾಧ್ಯತೆಗಳು ಹೆಚ್ಚಿಗೆ ಇರುತ್ತವೆ. ಆದರೆ, ಸಾಮಾನ್ಯರಿಗೆ, ಸಣ್ಣ ಹೂಡಿಕೆದಾರರಿಗೆ ಇಷ್ಟೊಂದು ವಿಚಾರಗಳ ಬಗ್ಗೆ ನಿರಂತರವಾಗಿ ಗಮನ ಹರಿಸುತ್ತ ಇರಲು ನಿಜವಾಗಿಯೂ ಸಮಯ ಇರುತ್ತದೆಯೇ? ಇಷ್ಟೆಲ್ಲ ಕೆಲಸಗಳ ನಡುವೆ ಅವರು ತಮ್ಮ ಇತರ ಕಾರ್ಯಗಳನ್ನೂ ಪೂರೈಸಬೇಕಲ್ಲ?! ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡ ನಂತರವೇ ಹೂಡಿಕೆ ಪಯಣ ಆರಂಭಿಸಬಹುದು.

ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವುದು ಒಂದು ಕಲೆ, ಅದೃಷ್ಟದ ಆಟ ಎಂದೆಲ್ಲ ಹೇಳುವುದಿದೆ. ಆದರೆ, ಅವೆಲ್ಲಕ್ಕಿಂತಲೂ ಹೆಚ್ಚಾಗಿ ಈಕ್ವಿಟಿಗಳಲ್ಲಿ ಹೂಡಿಕೆ ಮಾಡಲು ಅತ್ಯಗತ್ಯವಾಗಿ ಇರಬೇಕಾಗಿದ್ದು 'ಮಾಹಿತಿ' ಎಂದು ಹೇಳುತ್ತಾರೆ ಮಾರುಕಟ್ಟೆ ತಜ್ಞರು. ಇದು ಅವರ ಮಾತು ಮಾತ್ರವೇ ಅಲ್ಲ. ಹಲವು ಹೂಡಿಕೆದಾರರ ವೈಯಕ್ತಿಕ ಅನುಭವ ಕೂಡ ಹೌದು. ಸಣ್ಣ ಹೂಡಿಕೆದಾರರು ಕೂಡ ಈ ಮಾತಿಗೆ ತಲೆದೂಗುತ್ತಾರೆ. ಷೇರು ಮಾರುಕಟ್ಟೆಗಳಲ್ಲಿ ಅದೃಷ್ಟ ಕೂಡ ಒಂದಿಷ್ಟು ಕೆಲಸ ಮಾಡುತ್ತದೆಯಾದರೂ, 'ಮಾಹಿತಿ' ಇಲ್ಲದೆ ಮಾಡಿದ ಹೂಡಿಕೆಗಳು ತೀರಾ ಅಪಾಯಕಾರಿ ಹೌದು ಎಂಬುದಂತೂ ಖಚಿತ.

ಸರಿಯಾದ ಮಾಹಿತಿ ಹೊಂದಿದ್ದ ಮಾತ್ರಕ್ಕೆ ನಷ್ಟವೇ ಎದುರಾಗುವುದಿಲ್ಲ ಎಂದು ಖಚಿತವಾಗಿ ಹೇಳಲಾಗದು. ಷೇರು ಮಾರುಕಟ್ಟೆ ಸೂಚ್ಯಂಕಗಳು ತೀರಾ ಸಂವೇದನಾಶೀಲ. ಜಾಗತಿಕ ಮಟ್ಟದಲ್ಲಿ ಆಗುವ ರಾಜಕೀಯ ಬದಲಾವಣೆಗಳಿಂದ ಆರಂಭಿಸಿ, ಪ್ರಮುಖ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಕೈಗೊಳ್ಳುವ ತೀರ್ಮಾನಗಳವರೆಗೆ ಎಲ್ಲವೂ ಈ ಸೂಚ್ಯಂಕಗಳ ಮೇಲೆ ಪ್ರಭಾವ ಬೀರುತ್ತಲೇ ಇರುತ್ತವೆ. ಹೀಗಾಗಿ, ಇವು ಯಾವಾಗ ಕುಸಿಯುತ್ತವೆ, ಯಾವಾಗ ಏರಿಕೆ ಕಾಣುತ್ತವೆ ಎಂಬುದನ್ನು ಖಚಿತವಾಗಿ ಹೇಳಲು ಆಗದು. ಆದರೆ, ಒಂದಿಷ್ಟು ಮಾಹಿತಿ ಹೊಂದಿದ್ದು ಹೂಡಿಕೆ ಆರಂಭಿಸಿದರೆ ನಷ್ಟದ ಪ್ರಮಾಣ ಕಡಿಮೆ ಇರುವ ಸಾಧ್ಯತೆ ಜಾಸ್ತಿ ಇರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

